ರಾಷ್ಟ್ರೀಯ ಕ್ರೀಡೆಯಲ್ಲಿ ಕಳಪೆ ಕಿಟ್‌ಗಳ ವಿತರಣೆ

2365 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಯುವಜನ ಸೇವಾ ಹಾಗೂ ರಾಜ್ಯ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಕ್ರೀಡಾಪಟುಗಳಿಗೆ ರಾಷ್ಟ್ರೀಯ ಕ್ರೀಡೆಗಳ ಸಂದರ್ಭದಲ್ಲಿ ಒದಗಿಸಲಾದ ಕಿಟ್‌ಗಳು ಕಳಪೆ ಮಟ್ಟದ್ದಾಗಿದ್ದವೆಂಬ ವಿಚಾರ ನಿಜವೇ?

ಆ) ಈ ಕಿಟ್‌ಗಳನ್ನು ಯಾವ ದರದಲ್ಲಿ ಎಲ್ಲಿಂದ ಖರೀದಿಸಲಾಗಿತ್ತು. ಕಳಪೆ ಮಟ್ಟದ ಸಾಮಗ್ರಿ ಖರೀದಿಸಿದವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಅಜಯಕುಮಾರ್ ಸರ್‌ನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು.)

ಅ) ಇಲ್ಲ

ಆ) *ಒಲಂಪಿಕ್ ಸ್ಪೋರ್ಟ್ಸ್ ಕಂ. ಬೆಂಗಳೂರು ಇವರಿಂದ*

ಎ) ಟಿ-ಷರ್ಟ್ಸ್	1000 ತಲಾ ರೂ. 95-00 ರಂತೆ
ಬಿ) ಟಿರಿಕಾಟ್ ಕ್ಯಾಪ್ಸ್ (ಮುದ್ರಿತ)	1000 ತಲಾ ರೂ. 65.00 ರಂತೆ

ಸ್ವತಂತ್ರ ಸ್ಪೋರ್ಟ್ಸ್ ಪಟಿಯಾಲಾ ಇವರಿಂದ

ಎ) ಪ್ಲೇಯಿಂಗ್ ಕಿಟ್ಸ್	715 ತಲಾ ರೂ. 645.00 ರಂತೆ
ಬಿ) ಷೂಗಳು (ಜೊತೆ)	860 ತಲಾ ರೂ. 650.00 ರಂತೆ

ಫ್ರೀವಿಲ್ಸ್ ಜಲಂಧರ್ ಇವರಿಂದ

ಎ) ಟ್ರಾಕ್ ಸೂಟ್ಸ್	715 ತಲಾ ರೂ. 730.00 ರಂತೆ
ಬಿ) ಕಿಟ್ ಬ್ಯಾಗ್ಸ್	715 ತಲಾ ರೂ. 255.00 ರಂತೆ

ಗುಪ್ತ ಪರಿಧಾನ, ಬೆಂಗಳೂರು ಇವರಿಂದ

ಎ) ಬ್ಲೇಜರ್ಸ್	725 ತಲಾ ರೂ.2500.00 ರಂತೆ

ಕಳಪೆ ಮಟ್ಟದ ಸಾಮಗ್ರಿಗಳನ್ನು ಖರೀದಿಸಿರುವುದಿಲ್ಲ.

ಕ್ರೀಡಾ ಪಟುಗಳಿಗೆ ಪ್ರೋತ್ಸಾಹ

2366 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಕ್ರೀಡೆಗಳಲ್ಲಿ ಕರ್ನಾಟಕಕ್ಕೆ ಪದಕಗಳಿಸಿದ ಕ್ರೀಡಾಪಟುಗಳಿಗೆ ಪ್ರೋತ್ಸಾಹ ದಾಯಕ ಬಹುಮಾನಗಳನ್ನು ನೀಡಲಾಗಿದೆಯೇ?

ಆ) ಪದಕ ಗೆದ್ದ ಕ್ರೀಡಾಪಟುಗಳನ್ನು ರಾಜ್ಯ ಸರ್ಕಾರ ಯಾವ ರೀತಿ ಗೌರವಿಸಿತು?

ಶ್ರೀ ಅಜಯಕುಮಾರ್ ಸರ್‌ನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಇಲ್ಲ.

ಆ) ದಿನಾಂಕ : 12-6-1997ರ ಸಂಜೆ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಕರ್ನಾಟಕದ ವಿಜೇತರಿಗೆ ಮಾನ್ಯ ಮುಖ್ಯಮಂತ್ರಿಗಳು ಉಪಹಾರ ನೀಡಿ, ಅಭಿನಂದನೆಗಳನ್ನು ಸಲ್ಲಿಸಿದ್ದರು.

ದಿನಾಂಕ 14.8.1997ರ ಚುಕ್ಕೆ ಗುರುತಿನ ಪ್ರಶ್ನೋತ್ತರಗಳು

ಕುಂದಾಪುರ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆ

422 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಕುಂದಾಪುರ ಪುರಸಭೆಗೆ ಒಳಚರಂಡಿ ಮತ್ತು ಕುಡಿಯುವ ನೀರಿನ ವ್ಯವಸ್ಥೆಗೆ ಅಂದಾಜು ಪಟ್ಟಿ ತಯಾರಿಸಲಾಗಿದೆಯೇ? ತಯಾರಿಸಿದ್ದಲ್ಲಿ ಅದಕ್ಕೆ ತಗಲುವ ಅಂದಾಜು ಅದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು?

2. ಈ ಒಳ ಚರಂಡಿ ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಎಂದು ಮಂಜೂರು ಮಾಡಲಾಗುವುದು ಈ ತನಕ ಮಂಜೂರು ಮಾಡದಿರಲು ಕಾರಣವೇನು?

3. ಕುಂದಾಪುರ ಪುರಸಭೆಯಲ್ಲಿ ಒಳಚರಂಡಿ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಇಲ್ಲದಿರುವುದರಿಂದ ಜನರಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

4. ಈ ಬಗ್ಗೆ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

1) ಕುಂದಾಪುರ ಪಟ್ಟಣಕ್ಕೆ ಒಳಚರಂಡಿ ಮತ್ತು ಕುಡಿಯುವ ನೀರಿನ ಅಂದಾಜು ಪಟ್ಟಿಗಳನ್ನು ತಯಾರಿಸಿರುವುದಿಲ್ಲಾ.

2) ಉತ್ತರ (1) ರ ಆಧಾರದ ಮೇಲೆ ಈ ಪ್ರಶ್ನೆ ಉದ್ಭವಿಸುವುದಿಲ್ಲ.

3) ಬಂದಿದೆ.